



ಕಲೆ: ಪ್ರವೀಣ್ ಆಚಾರ್ಯ



## 1

'ಅಣ್ಣಯ್ಯಾ... ನಮ್ ದೇವರ ಕೆರೆಯಲ್ಲಿ ಯಾರದೊ ಹೆಣ ತೇಲ್ತ ಇದೆಯಂತೆ...' ಕೊಟ್ಟಿಗೆ ಕಸವನ್ನು ತಿಪ್ಪೆಗೆ ಹಾಕಿಬರಲು ಹೋಗಿದ್ದ ಚೇರ್ಮನ್ನರ ಸಂಬಳದಾಳು ತಿಮ್ಮರಾಯಿ ಏದುಸಿರು ಬಿಡುತ್ತ ಅವರ ಎದುರು ನಿಂತು ಹೇಳಿದ್ದ. ತಿಮ್ಮರಾಯಿ ಏನು ಹೇಳಿದ ಅನ್ನೋದು ಚೇರ್ಮನ್ನರಿಗೆ ಮೊದಲು ಅರ್ಥವೇ ಆಗಲಿಲ್ಲ. 'ಏನಂದೆ?' ಎನ್ನುತ್ತ ಅವನ ಮುಖ ನೋಡಿದರು. ಎರಡನೇ ಸಲ ಅವನು ಹೇಳಿದ್ದನ್ನು ಕೇಳಿ ಗಾಬರಿ ಆಯಿತು. ಅವನ ಮುಖವನ್ನೇ ಕೆಲಕ್ಷಣ ದಿಟ್ಟಿಸಿದರು. ಅವನ ಕಣ್ಣಲ್ಲಿ ಹೆದರಿಕೆ, ಮುಖದ ಮೇಲೆ ಗಾಬರಿ ಢಾಳಾಗಿ ಕಾಣುತ್ತಿತ್ತು.

ದೇವರ ಕೆರೆಯಲ್ಲಿ ಹೆಣ ತೇಲುತ್ತೆ ಅಂದರೇನು? ಯಾರ ಹೆಣವಂತೆ? ಸಾಯಕೆ ಬೇರಲ್ಲೂ ಜಾಗ ಸಿಗಲಿಲ್ಲವಾ? ಚೇರ್ಮನ್ನರ ತಲೆಯಲ್ಲಿ ಈ ಪ್ರಶ್ನೆಗಳು ಹುಟ್ಟಿಕೊಂಡವು. ಕಸದ ತಟ್ಟೆಯನ್ನು ಕೈಯಲ್ಲಿ ಹಿಡಕೊಂಡು ನಿಂತೇ ಇದ್ದ ತಿಮ್ಮರಾಯಿ ಕಡೆ ನೋಡುತ್ತ, 'ಹೋಗಲೇ ಹೋಗು. ಹೋಗಿ ಕೈ ಕಾಲು ತೊಳಕಂಡ್ ಬಾ' ಅಂತ ಗದರಿದರು. ಅವನು ಅಂಗಳದ ಮೂಲೆಯಲ್ಲಿದ್ದ ತೆಂಗಿನ ಮರದ ಕಡೆಗೆ ಹೋದ. ಜಗುಲಿ ಗೋಡೆಗೆ ಒರಗಿಕೊಂಡು ಕೈಯಲ್ಲಿ ಪೇಪರ್ ಹಿಡಿದು ಕೂತಿದ್ದವರು ಎದ್ದು ನಿಂತರು. ಮುಂದೆ ನಡೆದು ಗೇಟು ದಾಟಿದರು. ರಸ್ತೆ ಮಧ್ಯದಲ್ಲಿ ನಿಂತು ಎರಡೂ ಕಡೆ ನೋಡಿದರು. ರಸ್ತೆ ಖಾಲಿ ಖಾಲಿ. ಬಸ್‌ಸ್ಟ್ಯಾಂಡಿನಲ್ಲಿ ಒಂದು ನರಪಿಳ್ಳೆಯೂ ಇಲ್ಲ. ಕೆರೆಯಲ್ಲಿ ಹೆಣ ಬಿದ್ದಿದೆ ಅಂತ ಇವನಿಗೆ ಹೇಳಿದ ಪಡಪೋಶಿ ಯಾವನಿರಬಹುದು? ಅವನೇನು ಹೇಳಿದನೊ, ಇವನೇನು ಕೇಳಿಸಿಕೊಂಡನೊ ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತ ಒಳಕ್ಕೆ ಬಂದು ಮತ್ತೆ ಗೋಡೆಗೆ ಒರಗಿ ಕೂತರು.